## ನಿಮ್ಮೊಡನೆ

# ಹಿರಿಯ ಜೀವಕ್ಕೆ ಹೆಗಲು ಕೊಡಿ

ಆರ್ಥಿಕ ಪರಿಸ್ಥಿತಿ, ಸಾಮಾಜಿಕ ಸ್ಥಾನಮಾನ, ಆರೋಗ್ಯ ಸ್ಥಿತಿ, ಕುಟುಂಬಕ್ಕೆ ಈ ಹಿರಿಯರು ನೀಡಿರುವ ಕೊಡುಗೆ ಏನೇ ಇರಲಿ, ನಿಂದನೆ, ಶೋಷಣೆಯ ವಿಷಯ ಬಂದಾಗ ಇವೆಲ್ಲ ನಗಣ್ಯವಾಗಿಬಿಡುತ್ತದೆ. ಹಿರಿಯ ನಾಗರಿಕರಲ್ಲಿ ಹೆಚ್ಚಿನವರು ಕುಟುಂಬದ ಸದಸ್ಯರಿಂದ ಮಾತ್ರವಲ್ಲ, ಸಾರ್ವಜನಿಕ ಸ್ಥಳಗಳಲ್ಲೂ ಬೇಡದ ವ್ಯಕ್ತಿಯಾಗಿಬಿಟ್ಟಿರುವುದು ದುರಂತ.

ಯುವ ಭಾರತ ಎಂದು ಹೆಮ್ಮೆಯಿಂದ ಹೇಳಿಕೊಳ್ಳುವ, ಈ ಘೋಷವಾಕ್ಯವನ್ನು ಅಂತರರಾಷ್ಟ್ರೀಯವಾಗಿ ಟ್ರಂಪ್‌ಕಾರ್ಡ್‌ನಂತೆ ಬಳಸುತ್ತಿರುವ ನಾವು, ದೇಶದ ಭವಿಷ್ಯಕ್ಕೆ ಬುನಾದಿ ಹಾಕಿದ ನಮ್ಮ ಹಿರಿಯ ನಾಗರಿಕರನ್ನು ನಡೆಸಿಕೊಳ್ಳುವ ರೀತಿಯನ್ನು ನೋಡಿದರೆ ತಲೆತಗ್ಗಿಸಬೇಕಾಗುತ್ತದೆ. ಬಾಳ ಮುಸ್ಸಂಜೆಯಲ್ಲಿರುವ ಈ ಹಿರಿಯ ಜೀವಗಳನ್ನು ನಿಂದಿಸುವ, ವಂಚಿಸುವ, ನಿಷ್ಕರುಣೆಯಿಂದ ನಡೆಸಿಕೊಳ್ಳುವ ಪ್ರಕರಣಗಳು ದಿನೇದಿನೇ ಏರುತ್ತಿವೆ. ಜೂನ್ 15ರಂದು ನಡೆದ 'ವಿಶ್ವ ಹಿರಿಯ ನಾಗರಿಕರ ನಿಂದನೆ ವಿರುದ್ಧ ಜಾಗೃತಿ ದಿನ'ದ ಸಂದರ್ಭದಲ್ಲಿ ಹೆಲ್ಪೇಜ್ ಇಂಡಿಯಾ ಸಂಸ್ಥೆ ಬಿಡುಗಡೆ ಮಾಡಿರುವ ವರದಿಯ ಪ್ರಕಾರ ದೇಶದಲ್ಲಿ ಶೇ. 44ರಷ್ಟು ಹಿರಿಯ ನಾಗರಿಕರು ಸಾರ್ವಜನಿಕ ಸ್ಥಳಗಳಲ್ಲಿ ನಿಂದನೆಗೆ ಒಳಗಾಗುತ್ತಿದ್ದಾರಂತೆ. ಬೆಂಗಳೂರು ನಗರ ಈ ವಿಷಯದಲ್ಲಿ ಮುಂಚೂಣಿಯಲ್ಲಿದ್ದು ಶೇ.75ರಷ್ಟು ಹಿರಿಯ ನಾಗರಿಕರು ನಿಂದನೆಗೆ, ಶೋಷಣೆಗೆ ಈಡಾಗಿರುವುದು ಬಹಿರಂಗವಾಗಿದೆ. ಸಾರ್ವಜನಿಕ ಸಾರಿಗೆ ವ್ಯವಸ್ಥೆಗಳಾದ ಬಸ್, ರೈಲಿನಲ್ಲಿ ಹಿರಿಯ ನಾಗರಿಕರಿಗೆ ಸೀಟು ಬಿಟ್ಟುಕೊಡದೆ ಅವರನ್ನೇ ದೂಷಿಸುವುದರಿಂದ ಹಿಡಿದು, ಸರ್ಕಾರಿ ಆಸ್ಪತ್ರೆಗಳಲ್ಲಿ ಸರಿಯಾಗಿ ಚಿಕಿತ್ಸೆ ನೀಡದೆ ನಿರ್ಲಕ್ಷ್ಯ ತೋರುವವರೆಗೂ ಈ ನಿರ್ಲಜ್ಜ, ಅಸಹನೀಯ ನಡವಳಿಕೆ ಯುವ ಪೀಳಿಗೆಯಲ್ಲಿ ಮಾತ್ರವಲ್ಲ, ಮಧ್ಯ ವಯಸ್ಕರಲ್ಲೂ ಕಂಡು ಬರುತ್ತಿರುವುದು ಶೋಚನೀಯ.

ಬೆಂಗಳೂರು ಸೇರಿದಂತೆ 19 ದೊಡ್ಡ ಹಾಗೂ ಸಣ್ಣ ನಗರಗಳಲ್ಲಿ ಈ ಸಮೀಕ್ಷೆ ನಡೆದಿದ್ದು, ಇದರ ಪ್ರಕಾರ ಬೆಂಗಳೂರು ನಗರದಲ್ಲೇ ಶೇಕಡಾ 22ರಷ್ಟು ವೃದ್ಧರು ಸರ್ಕಾರಿ ಆಸ್ಪತ್ರೆಗಳ ಬದಲು ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲು ಬಯಸುತ್ತಾರಂತೆ. ಇದಕ್ಕೆ ಕಾರಣ ಸರ್ಕಾರಿ ಆಸ್ಪತ್ರೆ ವೈದ್ಯರು, ಸಿಬ್ಬಂದಿಯಿಂದ ಎದುರಿಸಬೇಕಾದ ಮನಸ್ಸನ್ನು ಘಾಸಿಗೊಳಿಸುವಂತಹ ಟೀಕೆಗಳು, ಚಿಕಿತ್ಸೆಯಲ್ಲಿ ತೋರುವ ಉದಾಸೀನ ಮತ್ತು ತಾರತಮ್ಯ. ಇನ್ನು ಮನೆಯಿಂದ ಹೊರಗೆ ಹೋಗಲೂ ಭಯ ಈ ಹಿರಿಯ ಜೀವಗಳಿಗೆ. ಅತಿ ವೇಗದಿಂದ, ನಿಯಮ ಉಲ್ಲಂಘಿಸಿ ವಾಹನ ಚಾಲನೆ ಮಾಡುವ ಸವಾರರಿಂದಾಗಿ ಅಪಘಾತದ ಭಯದಿಂದ ನಾಲ್ಕು ಗೋಡೆಗಳ ಮಧ್ಯೆಯೇ ಕಾಲ ಕಳೆಯಬೇಕಾದ ಪರಿಸ್ಥಿತಿ. ಹಿರಿಯರ ಜೊತೆ ಅನಾಗರಿಕವಾಗಿ ನಡೆದುಕೊಳ್ಳುವುದಂತೂ ಸರ್ವೇಸಾಮಾನ್ಯ ಆಗಿಬಿಟ್ಟಿದೆ.

ಆರ್ಥಿಕ ಪರಿಸ್ಥಿತಿ, ಸಾಮಾಜಿಕ ಸ್ಥಾನಮಾನ, ಆರೋಗ್ಯ ಸ್ಥಿತಿ, ಕುಟುಂಬಕ್ಕೆ ಈ ಹಿರಿಯರು ನೀಡಿರುವ ಕೊಡುಗೆ ಏನೇ ಇರಲಿ, ನಿಂದನೆ, ಶೋಷಣೆಯ ವಿಷಯ ಬಂದಾಗ ಇವೆಲ್ಲ ನಗಣ್ಯವಾಗಿಬಿಡುತ್ತದೆ. ಹಿರಿಯ ನಾಗರಿಕರಲ್ಲಿ ಹೆಚ್ಚಿನವರು ಕುಟುಂಬದ ಸದಸ್ಯರಿಂದ ಮಾತ್ರವಲ್ಲ, ಸಾರ್ವಜನಿಕ ಸ್ಥಳಗಳಲ್ಲೂ ಬೇಡದ ವ್ಯಕ್ತಿಯಾಗಿಬಿಟ್ಟಿರುವುದು ದುರಂತ. ವರದಿಯ ಪ್ರಕಾರ ಶೇ. 65ರಷ್ಟು ವೃದ್ಧರು ಆರ್ಥಿಕ ಬೆಂಬಲವಿಲ್ಲದ ಅಸಹಾಯಕರು. ಉಳಿದ ಶೇ. 35ರಷ್ಟು ಮಂದಿಗೆ ಹಣ, ಆಸ್ತಿ, ಹೂಡಿಕೆಯ ಬೆಂಬಲ, ಸ್ಥಿತಿವಂತ ಮಕ್ಕಳಿದ್ದರೂ ಒಂದಲ್ಲ ಒಂದು ರೀತಿಯಲ್ಲಿ ವಂಚನೆಗೆ, ನಿಂದನೆಗೆ ಒಳಗಾದವರೇ. ಮೂಲಭೂತ ಹಕ್ಕುಗಳಿರಲಿ, ಅಗತ್ಯವಿರುವಷ್ಟು ಆಹಾರ, ಔಷಧವನ್ನೂ ಪಡೆಯಲು ಹೆಣಗಾಡಬೇಕಾದ ಪರಿಸ್ಥಿತಿಯಿದೆ. ಇದಲ್ಲದೇ ನಿಂದನೆಗೆ ಒಳಗಾಗುವ ಹಿರಿಯ ಮಹಿಳೆಯರ ಸಂಖ್ಯೆ ಪುರುಷರಿಗಿಂತ ಜಾಸ್ತಿಯಿದೆ ಎನ್ನುತ್ತದೆ ಅಂಕಿ– ಅಂಶ. ಗೃಹಿಣಿಯಾಗಿದ್ದು, ಯಾವುದೇ ವರಮಾನ ಇಲ್ಲದಿರುವುದು, ಲಿಂಗ ತಾರತಮ್ಯ, ವಿಧವೆಯರ ಬಗ್ಗೆ ಇರುವ ಧೋರಣೆ, ಹಕ್ಕುಗಳ ಬಗ್ಗೆ ಅರಿವಿನ ಕೊರತೆ ಇದಕ್ಕೆ ಕಾರಣ ಎನ್ನಲಾಗಿದೆ.

ಈ ರೀತಿಯ ನಿಂದನೆ, ಶೋಷಣೆ ಹೆಚ್ಚಾಗಲು ಕಾರಣ ಪೋಷಕರ ಬಗ್ಗೆ ಮಕ್ಕಳು ತಳೆದಿರುವ ನಿರ್ಲಕ್ಷ್ಯ ಧೋರಣೆ ಎಂಬುದು ಸರ್ವವಿದಿತ. ಇಂತಹ ಅಲಕ್ಷ್ಯ, ಭಾವನಾತ್ಮಕ ಹಾಗೂ ದೈಹಿಕ ನಿಂದನೆ, ವಂಚನೆಗೆ ಹೆಚ್ಚಿನ ಪ್ರಕರಣಗಳಲ್ಲಿ ಮೂಲ ಕಾರಣ ಆಸ್ತಿ ಮತ್ತು ಒಡೆತನ ವಿವಾದ. ಹಿರಿಯರು ದುಡಿದ ಹಣವನ್ನು ಜಾಣತನದಿಂದ ಹೂಡಿಕೆ ಮಾಡದೆ ಮಕ್ಕಳಿಗೆಂದು ಖರ್ಚು ಮಾಡಿದ್ದರ ಪರಿಣಾಮವಿದು ಎಂಬುದು ತಜ್ಞರ ಅಂಬೋಣ.

ವ್ಯಕ್ತಿಯ ಜೀವಿತಾವಧಿ ಏರಿದೆ. 60 ವರ್ಷಗಳಿಗಿಂತ ಮೇಲ್ಪಟ್ಟವರ ಸಂಖ್ಯೆ ಸುಮಾರು 12 ಕೋಟಿಯಷ್ಟಿದ್ದು, ಕಳೆದ 10 ವರ್ಷಗಳಲ್ಲಿ ಈ ಏರಿಕೆ ಪ್ರಮಾಣ ಶೇ. 17.5. ಕರ್ನಾಟಕ ಸೇರಿದಂತೆ 7– 8 ರಾಜ್ಯಗಳಲ್ಲಿ ಈ ಪ್ರಮಾಣ ರಾಷ್ಟ್ರೀಯ ಏರಿಕೆಯ ಪ್ರಮಾಣವನ್ನೂ ಹಿಂದಿಕ್ಕಿದ್ದು, ಶೇ.35.5ರಷ್ಟಿದೆಯಂತೆ. ಈ ಹಿರಿಯ ನಾಗರಿಕರಿಗೆ ಅವರ ರಕ್ಷಣೆಗೆಂದು ಇರುವ '2007ರ ಪೋಷಕರ ಮತ್ತು ಹಿರಿಯ ನಾಗರಿಕರ ನಿರ್ವಹಣೆ ಮತ್ತು ಕಲ್ಯಾಣ' ಕಾನೂನಿನ ಬಗ್ಗೆ ತಿಳಿವಳಿಕೆ ನೀಡುವ ಅಗತ್ಯವಿದೆ. ಮಕ್ಕಳಿಲ್ಲದವರೂ ಇದರ ಅಡಿ ಸಂಬಂಧಿಕರಿಂದ ಜೀವನ ನಿರ್ವಹಣೆಗೆ ನೆರವು ಕೋರಬಹುದು. ಬೆಂಗಳೂರು ಸೇರಿದಂತೆ ಪ್ರಮುಖ ನಗರಗಳಲ್ಲಿ ಸಹಾಯವಾಣಿಗಳಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಹಿರಿಯ ನಾಗರಿಕರು ಸಹಾಯವಾಣಿ ಸೌಲಭ್ಯ ಪಡೆಯುತ್ತಿರುವುದು ಸ್ವಾಗತಾರ್ಹ. ಶಾಲಾ ಮಕ್ಕಳಿಗೆ ವೃದ್ಧರನ್ನು ಗೌರವಿಸುವ, ಆದರದಿಂದ ನಡೆಸಿಕೊಳ್ಳುವ ಬಗ್ಗೆ ತಿಳಿವಳಿಕೆ ನೀಡುವ ಬಗ್ಗೆಯೂ ಚಿಂತನೆ ನಡೆಯುತ್ತಿರುವುದು ಸ್ತುತ್ಯರ್ಹ.

■ ಸುಧಾ ಹೆಗಡೆ

